ಸಮ್ಮಿಟ್ ಊರಿನಿಂದ ಎರಡು ಮೈಲು ದೂರದಲ್ಲಿ ದೇವದಾರು ಮರಗಳಿಂದಾವೃತವಾಗಿದ್ದ ಒಂದು ಗುಡ್ಡಗಾಡು ಪ್ರದೇಶವಿತ್ತು. ಅಲ್ಲೊಂದು ಕಲ್ಲಿನ ಗುಹೆ ಇತ್ತು. ನಾನು ಮತ್ತು ಬಿಲ್ಲಿ ಅದರೊಳಗೆ ಠಿಕಾಣಿ ಹೂಡಿದ್ದೆವು.

ಒಂದು ದಿನ ಸಂಜೆ ಹೀಗೇ ನಾವು ಪಟೇಲನ ಮನೆಯ ಬಳಿ ಕುದುರೆಗಾಡಿಯಲ್ಲಿ ಮೆಲ್ಲಗೆ ಸಾಗುತ್ತಿದ್ದೆವು. ಮನೆಯ ಮುಂಭಾಗದ ರಸ್ತೆಯಲ್ಲಿ ಮನೆಯೊಂದರ ಕಾಂಪೌಂಡಿನ ಮೇಲೆ ಸಂಜೆ ಬಿಸಿಲು ಕಾಯಿಸುತ್ತಿದ್ದ ಬೆಕ್ಕಿನ ಮೇಲೆ ಕವಣೆಯಿಂದ ಗುರಿಯಿಡುತ್ತಿದ್ದ ಮರಿ ಪಟೇಲ ನಮ್ಮ ಕಣ್ಣಿಗೆ ಬಿದ್ದ.

'ಹೇಯ್, ಮರಿ? ಚಾಕಲೇಟ್ ಬೇಕಾ? ಹತ್ತು ಗಾಡಿ. ಒಂದು ರೌಂಡು ಹೊಡೆದು ಬರೋಣ!' ಬಿಲ್ ತುಂಬು ಸಲುಗೆಯಿಂದ ಹುಡುಗನನ್ನು ಆಹ್ವಾನಿಸಿದ.

**2**

ಮರಿ ಪಟೇಲ ಬೀಸಿದ ಚಿಕ್ಕ ಇಟ್ಟಿಗೆ ಚೂರೊಂದು ಬಿಲ್ಲಿಯ ಎಡಗಣ್ಣಿನ ತುಸು ಮೇಲ್ಭಾಗಕ್ಕೆ ಅಪ್ಪಳಿಸಿತು.

'ಅಮ್ಮಾ!...' ಎಂದು ಮೆಲ್ಲಗೆ ಚೀರಿದ ಬಿಲ್ ನೋವಿನಿಂದ. 'ಇದಕ್ಕಾಗಿ ಮುದುಕ ಮತ್ತೆ ಐನೂರು ಡಾಲರುಗಳನ್ನು ಹೆಚ್ಚುವರಿ ತೆರಬೇಕಾಗುವುದು!' ಎಂದ ಅವಡುಗಚ್ಚುತ್ತಾ.

ಸುತ್ತಮುತ್ತ ಯಾರೂ ಕಾಣಲಿಲ್ಲ. ಹುಡುಗ ಕಾಡು ಬೆಕ್ಕಿನಂತೆ ಕೊಸರಾಡಿದನಾದರೂ ನಾವು ಬಿಡಲಿಲ್ಲ. ಅವನ ಕೈಗಳನ್ನು ಬಲವಾಗಿ ಹಿಂದಕ್ಕೆ ಎಳೆದು ಅವನನ್ನು ಗಾಡಿ ಹತ್ತಿಸಿ ಸೀಟಿನ ಕೆಳಗೆ ಅದುಮಿ ಹಿಡಿದೆ. ಬಿಲ್ ಗಾಡಿ ಓಡಿಸಿದ. ನಮ್ಮ ಗುಹೆ ತಲುಪುತ್ತಿದ್ದಂತೆ ಹುಡುಗನನ್ನು ಒಳಗೆ ಎಳೆದುಕೊಂಡು ಹೋಗಿ, ನಾನು ಕುದುರೆಯನ್ನು ಬಿಚ್ಚಿ ಕಟ್ಟಿಹಾಕಲು ಹೊರಬಂದೆ. ಕತ್ತಲಾಗುತ್ತಿದ್ದಂತೆ ಬಾಡಿಗೆಗೆ ತಂದಿದ್ದ ಗಾಡಿಯನ್ನು ವಾಪಸ್ಸು ಮಾಡಲು ನಾನು ಸಮ್ಮಿಟಿಗೆ ಹೊರಟೆ. ಗಾಡಿಯವನ ಬಾಡಿಗೆ ಕೊಟ್ಟು ನಾನು ನಡೆದುಕೊಂಡೇ ವಾಪಸ್ಸು ಬಂದೆ.

ಗುಹೆಯ ಹೊರಗೆ ಮೂರು ಕಲ್ಲುಗಳನ್ನು ತ್ರಿಕೋನದಾಕಾರದಲ್ಲಿ ಜೋಡಿಸಿ ಬಿಲ್ ಬೆಂಕಿ ಉರಿಸಿದ್ದ. ಕಾಫಿ ಪಾತ್ರೆಯಲ್ಲಿ ನೀರು ಕುದಿಯುತ್ತಿತ್ತು. ತುಸು ದೂರದಲ್ಲಿ ಕಲ್ಲೊಂದರ ಮೇಲೆ ಕುಳಿತುಕೊಂಡು ಬಿಲ್ ತನ್ನ ಗಾಯಗಳನ್ನು ಪರೀಕ್ಷಿಸುತ್ತಿದ್ದ. ಹುಡುಗ ತನ್ನ ಕೆಂಗೂದಲಿಗೆ ಹದ್ದಿನ ಎರಡು ರೆಕ್ಕೆಗಳನ್ನು ಸಿಕ್ಕಿಸಿಕೊಂಡು ಬೆಂಕಿಯನ್ನೇ ತದೇಕಚಿತ್ತದಿಂದ ಗಮನಿಸುತ್ತಿದ್ದ. ನನ್ನನ್ನು ನೋಡುತ್ತಿದ್ದಂತೆ ಕೈಯಲ್ಲಿದ್ದ ಮಾರುದ್ದ ಕೋಲನ್ನು ಬಂದೂಕಿನಂತೆ ನನ್ನತ್ತ ತಿರುಗಿಸುತ್ತಾ ಮೆಲ್ಲ ಮೆಲ್ಲನೆ ಮುಂದೆ ಬರತೊಡಗಿದ.

'ಹೇಯ್ ದರಿದ್ರ ಮೂತಿಯವನೇ... ರೆಡ್ ಇಂಡಿಯನ್ ಯಜಮಾನನ ಸೀಮೆಯೊಳಗೆ ಇಷ್ಟೊಂದು ಸಲೀಸಾಗಿ ಬರಲು ನಿನಗೆಷ್ಟೋ ಧೈರ್ಯ?' ಎಂದ. ಅವನ ಕಣ್ಣುಗಳು ನಿಜವಾಗಿಯೂ ಕಿಡಿ ಕಾರುತ್ತಿದ್ದವು.

'ಅವನೀಗ ತಣ್ಣಗಾಗಿದ್ದಾನೆ!' ಪ್ಯಾಂಟಿನ ಕಾಲನ್ನು ಮಂಡಿಯವರೆಗೆ ಎಳೆಯುತ್ತಾ, ನನ್ನನ್ನು ಸಮಾಧಾನಿಸಲು ಬಿಲ್ ಹೇಳಿದ. ಅವನ ಮಂಡಿ ಇಷ್ಟಗಲ ತರಚಿತ್ತು. 'ನಾವು ರೆಡ್ ಇಂಡಿಯನ್‌ರ ಆಟ ಆಡುತ್ತಿದ್ದೆವು. ನಾನು ಬಿಳಿಯ, ಹ್ಯಾಂಕ್. ರೆಡ್ ಇಂಡಿಯನ್ ಯಜಮಾನನ ಕೈದಿ. ನಾಳೆ ಬೆಳಗಿನ ಜಾವ ನನ್ನ ತಲೆ ಕಡಿಯುವುದೆಂದು ಯಜಮಾನ ಈಗಾಗಲೇ ತೀರ್ಮಾನಿಸಿದ್ದಾನೆ. ನನ್ನ ದೊರೆ ಜೆರೊನಿಮನೇ! (ಜೆರೊನಿಮೊ, ಮೆಕ್ಸಿಕನರ ಮತ್ತು ಅಮೆರಿಕನರ ವಿರುದ್ಧ ಸೆಣಸಾಡಿದ್ದ ರೆಡ್ ಇಂಡಿಯನ್ ಬುಡಕಟ್ಟಿನ ಯಜಮಾನ) ಇವನು